


ಮಾಡು.'

ಮಿಕಿತಾಳೇ ಉತ್ತರಿಸಿದಳು. 'ಅವಳಿಗೆ ಮುಜುಗರವಾಗಿರಬೇಕು. ಆ ಕೆಲಸ ಮಾಡುವವನು ಹೆಚ್ಚು ಬಾಡಿಗೆ ಕೇಳುತ್ತಾ ಇದ್ದಾನೆ' ಎಂದಳು.

'ಬಹುಶಃ ಪೆಟ್ರೋಲಿನ ಬೆಲೆ ಏರಿರಬೇಕು. ಕೆಲವು ದಿನ ತಡೆಯಿರಿ. ಮಸಾಯ ಏನಾದರೂ ವ್ಯವಸ್ಥೆ ಮಾಡಬಹುದು. ನಮಗಂತೂ ಪಿಯಾನೊ ಬರುತ್ತದೆಂದು ರೋಮಾಂಚನವಾಗಿದೆ. ರೊಸಾಲಿಯ, ನಾವೀಗ ಬೇರೇನನ್ನೂ ಯೋಚಿಸುತ್ತಾ ಇಲ್ಲ.'

ರೊಸಾಲಿಯಾಳಿಗೆ ಈ ಕೊನೆಯ ವಾಕ್ಯ ಸುಳ್ಳೆಂದನಿಸಿತು. ವಾರ ಬಿಟ್ಟು ಯಾವೋ ದೆ ಒಲಿವೈರಾ ಪುನಃ ಕರೆ ಮಾಡಿದ– 'ಮಸಾಯ, ನಿನಗದು ಬೇಕೋ ಬೇಡವೋ ಹೇಳು.'

ಮಸಾಯ ತಡವರಿಸಿದ. 'ಯಾವ್ಹೋ, ಏನು ಹೇಳಬೇಕೆಂದು ತಿಳಿಯುತ್ತಿಲ್ಲ. ನೀನೇನೋ ಉದಾರತೆಯಿಂದ ಇನಾಮಾಗಿ ಕೊಡಬೇಕೂಂತಿದ್ದೀಯಾ. ಆದರೆ, ನಾವದನ್ನು ಸ್ವೀಕರಿಸುವುದು ಸಾಧ್ಯವಿಲ್ಲ. ಇಲ್ಲಿಗದನ್ನು ತರಲು ಹರೋಹರವಾಗುತ್ತದೆ. ಅಲ್ಲದೇ ಅದನ್ನಿಡಲು ನಮ್ಮಲ್ಲಿ ಜಾಗವೂ ಇಲ್ಲ. ಇದನ್ನು ನಾವು ಮೊದಲೇ ಯೋಚಿಸಬೇಕಿತ್ತು. ಮಿಕಿತಾ ಬಹಳ ಮುಜುಗರ ಪಟ್ಟಳು.'

'ಅಂದರೆ, ನಿಮಗೆ ಪಿಯಾನೊ ಬೇಡ. ಅಲ್ಲವೇ?'

'ಬೇಕು... ಆದರೆ, ನಮಗೆ ಆಗುತ್ತಾ ಇಲ್ಲ... ನಮ್ಮಿಂದ ಅಸಾಧ್ಯ...' ಯಾವೋ ದೆ ಒಲಿವೈರಾ ಫೋನ್ ಕೆಳಗಿಟ್ಟ. ಅವನಿಗೆ ಅರ್ಥವಾಗತೊಡಗಿತ್ತು.

'ನೋಡು ರೊಸಾಲಿಯ, ಪಿಯಾನೊವನ್ನು ಕೊಡುವುದು ಸಾಧ್ಯವಾಗುತ್ತಾ ಇಲ್ಲ. ಅಂದರೆ, ಸಾಧ್ಯವೇ ಆಗುತ್ತಾ ಇಲ್ಲ' – ಖಿನ್ನತೆ ತುಂಬಿದ ಕೆಲವು ಕ್ಷಣಗಳ ಬಳಿಕ ಸಾರಾ ಬಿಕ್ಕುತ್ತಾ ಮಾತನಾಡುವುದು ಕೇಳಿಸಿತು. ಅವಳ ತಾಯಿ ಅವಳನ್ನು ಸಮಾಧಾನಿಸಿದಳು.

'ಚಿಂತಿಸಬೇಡ ಮಗಳೇ, ಎಲ್ಲ ಸರಿಯಾಗುತ್ತದೆ. ಅದಕ್ಕೆ ಎಷ್ಟು ಬೆಲೆ ಬರುತ್ತದೋ ಅಷ್ಟಕ್ಕೆ ಕೊಟ್ಟುಬಿಡೋಣ ಅಮ್ಮ, ಅದನ್ನು ಈಗಿಂದೀಗ